ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾನ್ಯ ಶಂಕರರೆಡ್ಡಿಯವರೂ ಕೂಡ ರೈತರ ಪರವಾಗಿಯೇ ಬಂದಿದ್ದರು, ಅವರ ಪರವಾಗಿಯೇ ಒತ್ತಾಯ ಮಾಡುತ್ತಿದ್ದರು. ಆದರೂ ಈ ರೀತಿಯ ಸಂಘರ್ಷವೇಕೆಂದು ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ರೀತಿಯ ಸಂಘರ್ಷಕ್ಕೆ ಕಾರಣ ನೀವು ಬೇಗ ಉತ್ತರ ಕೊಡಲು ಏಳಲಿಲ್ಲ, ಅದೇ ತಾಪತ್ರಯ.

ಶ್ರೀ ಎಂ. ವೀರಪ್ಪ ಮೊಯಿಲಿ: ನಾವೆಲ್ಲರೂ ಕೂಡ ರೈತರ ಪರವಾಗಿ ಇದ್ದೇವೆ. ವಾಟರ್ ಮ್ಯಾನೇಜ್‌ಮೆಂಟ್ ಬೋರ್ಡಿನಲ್ಲಿ ಯಾವ ಕೆನಾಲ್ನಲ್ಲಿ ಎಷ್ಟು ನೀರು ಬಿಡಬೇಕೆಂದಿದೆ; ಅದನ್ನು ರೈತರಿಗೆ ಕೊಡಬಾರದೆಂದು ಹಿಡಿದಿಟ್ಟುಕೊಂಡಿಲ್ಲ. ಯಾವ್ಯಾವ ಚಾನಲ್ನಲ್ಲಿ ಎಷ್ಟೆಷ್ಟು ನೀರು ಯಾರ್ಯಾರಿಗೆ ಹೋಗಬೇಕೆಂದು ನಿಷ್ಕರ್ಷವಾಗಿದೆ. ನಮ್ಮಲ್ಲಿ ಕೂಡ ಆಗಿದೆ. ಆಂಧ್ರದವರಿಗೆ ಇಂತಿಷ್ಟು ಹೋಗಬೇಕೆಂದು ನಿಷ್ಕರ್ಷವಾಗಿದೆ. ಒಬ್ಬರಿಗೆ ಹೆಚ್ಚು ನೀರು ಬಿಟ್ಟರೆ ಮತ್ತೊಬ್ಬರ ನೀರನ್ನು ಅಪಹರಿಸಿದ ಹಾಗಾಗುತ್ತದೆ. ರೈತರಿಗೆ ನೀರು ಪಡೆಯುವ ಹಕ್ಕು ಇದೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ. ನಮ್ಮಲ್ಲಿ ನೀರಿದ್ದರೆ ತಮಿಳುನಾಡಿನವರು ಕೇಳಿದಾಗ ಕೊಡಬೇಕಾಗುತ್ತದೆ. ನಮ್ಮಲ್ಲಿ ನೀರಿಲ್ಲದಿದ್ದರೆ ಅವರಿಗೆ ನೀರು ಕೊಡುವ ಪರಿಸ್ಥಿತಿ ಇಲ್ಲ. ನೀರಿದ್ದರೆ ಕೊಡುತ್ತೇವೆಂದು ಹೇಳುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತೇವೆ. ಅವರ ಕಡೆ ಕೂಡ ರೈತರಿದ್ದಾರೆ. ಅವರ ಕಡೆ ಬರತಕ್ಕಂತಹ ಹಕ್ಕಿನ ನೀರನ್ನು ನಮಗೆ ಕೊಡಿ ಅಂದರೆ ಅವರು ಕೊಡುವುದಿಲ್ಲ; ನಾನು ಮಾತನಾಡಿದ್ದೇನೆ. ಆಂಧ್ರದ ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡಿದ್ದೇನೆ. ನಮಗೆ ತೊಂದರೆ ಇದೆ ಎಂದು ಅವರೂ ಹೇಳಿದ್ದಾರೆ. ಆದರೂ ಸಹ ಸಹಾಯಮಾಡಿ ಎಂದು ಒತ್ತಾಯ ಮಾಡಿದ್ದೇನೆ. ನಾವೀಗ ರೈತರಿಗೆ ಬೆಳೆ ನಾಶವಾಗದ ಹಾಗೆ ರಕ್ಷಣೆ ಮಾಡಲಿಕ್ಕೆ ವಿಚಾರ ಮಾಡುತ್ತೇವೆ. ಈಗಾಗಲೇ 2 ತಿಂಗಳು ವಿಸ್ತರಣೆಯಾಗಿದೆ. ಎರಡು ತಿಂಗಳ ಹಿಂದೆಯೇ ಅಂದರೆ ಡಿಸೆಂಬರ್ 15ನೇ ತಾರೀಖಿಗೆ ನಿಲ್ಲಿಸಬೇಕಾಗಿತ್ತು. ಇವತ್ತು ಜನವರಿಯಾದರೂ ಕೂಡ ನಿಲ್ಲಿಸಿಲ್ಲ, ನೀರು ಕೊಡುತ್ತಿದ್ದೇವೆ. ರೈತರು ಸ್ವಲ್ಪ ಆಲೋಚನೆ ಮಾಡಬೇಕು. ಏಕೆಂದರೆ, ಒಂದು ತಾಲ್ಲೂಕಿನ ರೈತರು ಮಾತ್ರ ಬದುಕಿದರೆ ಸಾಲದು. ಅನೇಕ ತಾಲ್ಲೂಕುಗಳ ರೈತರು ಈ ನೀರನ್ನು ಅವಲಂಬಿಸಿದ್ದಾರೆ, ಇದರ ಬಗ್ಗೆ ಸಂಜೆ ವರದಿ ಕೊಡುತ್ತೇನೆ. ಡಿ.ಸಿ.ಎಂ. ಅವರ ಹತ್ತಿರ ನಾನು ಮಾತನಾಡುತ್ತೇನೆ. ಇವತ್ತು ಅಥವಾ ನಾಳೆ ಅವರು ವಿವರವಾದ ಹೇಳಿಕೆ ಕೊಡುತ್ತಾರೆ. ನಮ್ಮ ಪ್ರಯತ್ನ ಮುಂದೆ ಸಾಗಿದೆ. ನೀರು ಕೊಡಬೇಕೆಂದು ಆಂಧ್ರದ ಮುಖ್ಯಮಂತ್ರಿಯವರ ಹತ್ತಿರ ಪುನಃ ಮಾತನಾಡುತ್ತೇನೆ; ಪುನಃ ಒತ್ತಾಯ ಮಾಡುತ್ತೇನೆ. ರೈತರಿಗೆಷ್ಟು ಸಹಾಯ ಮಾಡಲಿಕ್ಕೆ ಸಾಧ್ಯವಿದೆ ಅಷ್ಟನ್ನೂ ಮಾಡುತ್ತೇವೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ

ಹಾವೇರಿ ಸಕ್ಕರೆ ಕಾರ್ಖಾನೆಯಲ್ಲಿ ಕಾನೂನು ಬಾಹಿರವಾಗಿ ನಿರ್ದೇಶಕರ ನೇಮಕಾತಿ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಲಿಯಲ್ಲಿ ಚುನಾಯಿತ ಸದಸ್ಯರಿದ್ದಾಗ್ಯೂ ಸಹ ಸರಕಾರದವರು ಕಾನೂನು ಬಾಹಿರವಾಗಿ ನಿರ್ದೇಶಕರನ್ನು ನಾಮ ನಿರ್ದೇಶನ ಮಾಡಿರುವ ಬಗ್ಗೆ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಡಾ॥ ಹೆಚ್.ಡಿ. ಲಮಾಣಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಾಕ್ಷರೆ, ಮಾನ್ಯ ಸಹಕಾರ ಸಚಿವರ ಪರವಾಗಿ ಈ ಹೇಳಿಕೆ ನೀಡುತ್ತೇನೆ:

ರಾಜ್ಯ ಸರ್ಕಾರವು ದಿನಾಂಕ: 5-12-1989ರ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ 48 ಸಿಒಎಫ್ 89(ಪ್ರಿ)(2)ರಲ್ಲಿ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಾವೇರಿ (ಸಂಗೂರ) ಈ ಕಾರ್ಖಾನಾಗೆ ಧಾರವಾಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಂಟು ಮಂದಿ ಅಧಿಕಾರಿ ಸದಸ್ಯರ ಮಂಡಳಿಯನ್ನು ರಚಿಸಿತ್ತು. ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 33385:92 ರಲ್ಲಿ ದಿನಾಂಕ: 9-11-93 ರಂದು ಆದೇಶ ನೀಡಿ ಸದರಿ ಕಾರ್ಖಾನೆಯ ಆಡಳಿತ ಮಂಡಳಿಗೆ 1994ರ ಜನವರಿ ಅಂತ್ಯದ ಒಳಗಾಗಿ ಚುನಾವಣೆ ಮಾಡಲು ಆದೇಶಿಸಿದ್ದರ ಮೇರೆಗೆ ದಿನಾಂಕ: 30-1-1994ರಂದು ಚುನಾವಣೆ ನಡೆದಿದ್ದು ಅದರಲ್ಲಿ 18 ಜನ ಸದಸ್ಯರು ಚುನಾಯಿತರಾಗಿರುತ್ತಾರೆ. ಇದಾದ ನಂತರ ಸರ್ಕಾರ ಯಾವುದೇ ನಾಮ ನಿರ್ದೇಶನ ಮಾಡಿರುವುದಿಲ್ಲ. ಆಡಳಿತ ಮಂಡಳಿಗೆ ಸರ್ಕಾರವು ಸಹಕಾರ ಸಂಘಗಳ ಕಾಯ್ದೆ, ಕಾರ್ಖಾನೆಯ ಉಪ ನಿಯಮ ಮತ್ತು ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪುಗಳಿಗೆ ಒಳಪಟ್ಟು ನಾಮ ನಿರ್ದೇಶನ ಮಾಡುವುದನ್ನು ಪರಿಶೀಲಿಸುವುದು.

+ ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ನಾಮಕರಣ ಮಾಡಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಬಹಳ ಸಂತೋಷ. ಏನಿದ್ದರೂ ಕಾಯ್ದೆ ಕಾನೂನು ಪ್ರಕಾರ ಹಾಗೂ ಉಚ್ಚ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ ಎಂದು ಹೇಳಿದ್ದೀರಿ, ಸಂತೋಷ. ಆದರೆ ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ನಾವು ಚುನಾವಣೆ ಮಾಡಿದ್ದೇವೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಈ ಚುನಾವಣೆಯನ್ನು ಮೂರು-ನಾಲ್ಕು ಬಾರಿ ಮುಂದಕ್ಕೆ ಹಾಕಿ ಅದರ ನಂತರ ಚುನಾವಣೆಯನ್ನು ಮಾಡಿದ್ದಾರೆ. ಈ ಚುನಾವಣೆಯನ್ನು ಮಾಡುವುದಕ್ಕೆ ಯಾವ ಒಂದು ಆಸಕ್ತಿ ಸರ್ಕಾರಕ್ಕೆ ಇದ್ದಿಲ್ಲ. ಹಾಗಾಗಿ ನಾವು ಉಚ್ಚನ್ಯಾಯಾಲಯದ ಕಡೆ ಧಾವಿಸಿ ಹೋದ ನಂತರ ನಾವು ಚುನಾವಣೆ ಮಾಡುವುದಕ್ಕೆ ಒಪ್ಪಿಕೊಂಡು ಒಂದು ಒತ್ತಾಯದಿಂದ ಈ ಚುನಾವಣೆಯಾಗಿದೆ. ಚುನಾವಣೆಯಲ್ಲಿ ಜನರು ತೀರ್ಪು ಕೊಟ್ಟಿದ್ದಾರೆ. ಇವತ್ತು ಅವರೇ ಹೇಳಿದ ಹಾಗೆ 18 ಜನ ಡೈರೆಕ್ಟರ್ಸ್ ಆರಿಸಿ ಬಂದಿದ್ದಾರೆ. ಅದರಲ್ಲಿ ನಮ್ಮ ಸ್ನೇಹಿತರಾದಂಥ ಲಮಾಣಿ ಸಾಹೇಬರು, ಸಾಂಡ್ರಾ ಸಾಹೇಬರು ಎಲ್ಲಾ ಜಿಲ್ಲಾ ಸಚಿವರು ಬಹಳಷ್ಟು ಪ್ರಯತ್ನವನ್ನು ಮಾಡಿದರು. ಶಾಸಕರು, ಕಾಂಗ್ರೆಸ್ಸಿಂದ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದರು; ಅದು ನನಗೆ ಗೊತ್ತು. ಆದರೆ ನಿಮಗೆ ಸಾಧ್ಯವಾಗಲಿಲ್ಲ. ಎಲ್ಲಾ ರೀತಿಯಿಂದ ಪ್ರಯತ್ನವಾಯಿತು. ಇವತ್ತು 18ರಲ್ಲಿ 14 ಜನ ನಮ್ಮ ಪಕ್ಷದವರು ಆರಿಸಿಬಂದಿದ್ದಾರೆ. ಆದರೆ ಇವತ್ತು ಏನು ನಡೆಯುತ್ತಿದೆ ಎಂದರೆ ನಾಮಕರಣ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಸೆಕ್ಷನ್ 29 ಮತ್ತು ಸೆಕ್ಷನ್ 53 ಈ ಎರಡೂ ಸೆಕ್ಷನ್ ಕೆಳಗೆ ನಾಮಕರಣ ಮಾಡುವ ಒತ್ತಡ ಸರ್ಕಾರದ ಮೇಲೆ ಸಾಕಷ್ಟು ಬಂದಿದೆ; ಸಹಕಾರ ಸಚಿವರ ಮೇಲೆ ಬಂದಿದೆ. ತಾವು ಇವತ್ತು ಕಾಯ್ದೆಬದ್ಧವಾಗಿ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಉತ್ತರವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಹಾಗಾಗಿ ನಾನು ಎರಡು-ಮೂರು ಪ್ರಶ್ನೆಗಳನ್ನು ಕೇಳುತ್ತೇನೆ. ಇದೇ ಪ್ರಕಾರ ಕಾಯ್ದೆಬದ್ಧವಾಗಿ ಮಾಡುತ್ತೇವೆಂದು ಹೇಳಿ ಶ್ರೀನಿವಾಸಪುರದ ಪಿಎಲ್ಡಿ ಬ್ಯಾಂಕ್ನಲ್ಲಿ ತಾವು ಚುನಾವಣೆಯನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ಸೆಕ್ಷನ್ 29(4) ಏನು ಹೇಳುತ್ತದೆ ಎಂದರೆ,

"The Secretary of the Co-operative Society shall within fifteen days from the date of election convene a meeting of the Members of the Committee including nominated and Ex-officio Members if any for the purpose of election of President, Vice-President, Chairman and Vice-Chairman and such other office bearers as are required to be elected."

15 ರೊಳಗೆ ಮಾಡಬೇಕು ಎಂದು ಇದೆ. "shall" ಎಂದು ಇದೆ. ಆದರೂ ಸಹ ಇವತ್ತು ಮಾನ್ಯ ಸಹಕಾರ ಸಚಿವರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲೂ ಮಾತನಾಡಿದ್ದೇನೆ. ಕಾಯ್ದೆಬದ್ಧವಾಗಿ ಮಾಡುತ್ತೇವೆ ಎಂದು ಇದೇ ಪ್ರಕಾರದ ಭರವಸೆ ಬಂದಿದೆ. ಆದರೆ ಕಾಯ್ದೆ ವಿರುದ್ಧ ಎಲ್ಲ ನಡೆಯುತ್ತಿದೆ. ಹಾಗಾಗಿ ತಾವು ಪುನಃ ಕಾಯ್ದೆ ವಿರುದ್ಧ ಮಾಡುತ್ತೀರೇನೊ ಎನ್ನುವ ಭಯ ಇದೆ. ಇವತ್ತು ಶ್ರೀನಿವಾಸಪುರದ ಪಿಎಲ್ಡಿ ಬ್ಯಾಂಕ್ನಲ್ಲಿ ಅಡ್ಮಿನಿಸ್ಟ್ರೇಟರ್ ಇಲ್ಲ. 15ದಿವಸದೊಳಗೆ ಮ್ಯಾನ್ಡೇಟರಿ ಛೇರ್ಮನ್, ವೈಸ್ ಛೇರ್ಮನ್ ಎಲೆಕ್ಷನ್ ಆಗಬೇಕಾಗಿದೆ. ಅದನ್ನೂ ಮಾಡಿಲ್ಲ. ಅದೇ ಪ್ರಕಾರ ನಮಗೆ ಏನು ಭಯ ಇದೆ ಎಂದರೆ, 15 ದಿವಸದೊಳಗೆ ಅಂದರೆ 14ಕ್ಕೆ ಏನು ಚುನಾವಣೆ ಫಿಕ್ಸ್ ಆಗಿದೆ ಮ್ಯಾನ್ಡೇಟರಿ ಪ್ರಾವಿಷನ್, ಅದನ್ನು ತಾವು ಮುಂದಕ್ಕೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು. ಹಾಗಾಗಿ ನಮಗೆ ಸ್ಪಷ್ಟವಾದ ಭರವಸೆ ಬೇಕಾಗಿದೆ. ಕಾಯ್ದೆಪ್ರಕಾರ 15 ದಿವಸದಲ್ಲಿ ಚುನಾವಣೆಯನ್ನು ಮಾಡುತ್ತೇವೆ. ಆ ಚುನಾವಣೆಯನ್ನು ಮುಂದೆ ಹಾಕುವುದಿಲ್ಲ, ಅಧ್ಯಕ್ಷರು ಮತ್ತು ಉಪಧ್ಯಾಕ್ಷರ ಚುನಾವಣೆಯನ್ನು ಮಾಡುತ್ತೇವೆ ಎನ್ನುವ ಭರವಸೆ ಕೊಡಬೇಕೆಂದು ಕೇಳುತ್ತಿದ್ದೇದೆ. ಎರಡನೆಯದು ಮುಖ್ಯವಾದುದು ಏನೆಂದರೆ, ಸೆಕ್ಷನ್ 29 ಮತ್ತು ಸೆಕ್ಷನ್ 53 ಒಂದು ಸೆಕ್ಷನ್ ಕೆಳಗೆ ತಾವು ಮಾಡಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಬೋರ್ಡ್ ಡೈರೆಕ್ಟರ್ ಸಂಖ್ಯೆ ಎಷ್ಟಿದೆ, ಅದರಲ್ಲಿ ಮೂರನೇ ಒಂದು ಭಾಗ ಬೇಕಾದರೆ ಸೆಕ್ಷನ್ 53 ಮುಖಾಂತರ ಮಾಡಬಹುದು. ಆದರೆ ಸೆಕ್ಷನ್ 29 ಮತ್ತು ಸೆಕ್ಷನ್ 53 ಎರಡೂ ಸೆಕ್ಷನ್ಗಳನ್ನು ರಿವೋಕ್ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆಯೂ ನೀವು ಸ್ಪಷ್ಟೀಕರಣವನ್ನು ನನಗೆ ಕೊಡಬೇಕಾಗುತ್ತದೆ. ಮೂರನೆಯದು ಈಗಾಗಲೇ ನಮ್ಮ ಉಚ್ಚನ್ಯಾಯಾಲಯದವರು - ರಿಟ್ ಪಿಟಿಷನ್ ನಂ.10889:1988 ಇದರಲ್ಲಿ ಒಂದು ತೀರ್ಪು ಕೊಟ್ಟಿದ್ದಾ.

1.00 ಪಿ.ಎಂ.

ಅದು ಏನು ಅಂದರೆ ಬೈಲಾದಲ್ಲಿ ಒಂದು ವೇಳೆ ಡೈರೆಕ್ಟರ್ ನಾಮಿನೇಟ್ ಮಾಡಲಿಕ್ಕೆ ಅವಕಾಶ ಇದ್ದರೆ ಆ ಬೈಲಾ ಕೆಳಗೆ ಮತ್ತು ಸೆಕ್ಷನ್ 29(ಸಿ) ಕೆಳಗೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ 29(ಸಿ) ಕೆಳಗೆ ಮಾಡಿದರೆ ಬೈಲಾ ಕೆಳಗೆ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಸೆಕ್ಷನ್ 53 ಅನ್ನು ನೀವು ರಿವೋಕ್ ಮಾಡಿದರೆ . 29(ಸಿ) ಮತ್ತು ಬೈಲಾವನ್ನು ಲೋಪ ಮಾಡುವುದಕ್ಕೆ ಬರುವುದಿಲ್ಲ, ಇದರ ಬಗ್ಗೆ ತೀರ್ಪು ಆಗಿದೆ. ಹೀಗಾಗಿ ಹೈಕೋರ್ಟ್ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ ಎಂದು ನೀವು ಸ್ಪಷ್ಟವಾಗಿ ಹೇಳಿದಿರಿ. ಹೈಕೋರ್ಟ್ ತೀರ್ಪು ಬಹಳ ಸ್ಪಷ್ಟವಾಗಿದೆ. ಸೆಕ್ಷನ್ 53 ಕೆಳಗೆ ಮಾಡಿದರೆ 29 ಅಥವಾ ಬೈಲಾ ಕೆಳಗೆ ಮಾಡುವುದಕ್ಕೆ ಆಗುವುದಿಲ್ಲ. ಆ ಪ್ರಕಾರ ಪ್ರಜಾತಂತ್ರದಲ್ಲಿ ಜನ ತಮ್ಮ ತೀರ್ಪು ಕೊಟ್ಟು, ಪ್ರಜಾಪ್ರಭುತ್ವದೊಳಗೆ ತೀರ್ಪು ಕೊಟ್ಟು ತಮ್ಮ ಪ್ರತಿನಿಧಿಗಳನ್ನು ಆರಿಸಿದ್ದಾರೆ, ತಾವು ಈ ಬ್ಯಾಕ್ ಡೋರ್ ಎಂಟ್ರಿಯಿಂದ ಆ ತೀರ್ಪನ್ನು ಅಲಾಯಿದ ಮಾಡಬೇಡಿ. ಆ ಭಾಗದ ಮತದಾರರಿಗೆ ಅದೊಂದು ದೊಡ್ಡ ಮೋಸ ಆಗಬಹುದು. ಇನ್ನು ಎರಡನೆಯದು ನಾಮಿನೇಷನ್ ಮಾಡುವಾಗ ನಿಮಗೆ ಅಧಿಕಾರ ಇದೆ, ಒಪ್ಪಿಕೊಳ್ಳುತ್ತೇನೆ.

ಆ ಅಧಿಕಾರಕ್ಕೆ ಅಡ್ಡಿ ಬರುವುದಕ್ಕೆ ನನಗೆ ಇಚ್ಛೆ ಇಲ್ಲ. ಆದರೆ ನಾನು ಒಂದು ಸಲಹೆ ಮಾಡುತ್ತಿದ್ದೇನೆ. ದಯಮಾಡಿ ಯಾರು ಚುನಾವಣೆಯಲ್ಲಿ ಸೋತಿದ್ದಾರೆ ಅವರನ್ನು ನಾಮಿನೇಷನ್ ಮಾಡುವುದಕ್ಕೆ ಹೋಗಬೇಡಿ. ನಿಜವಾಗಿ ಹೇಳಬೇಕಾದರೆ ನಾಮಿನೇಷನ್ ಮಾಡಬಾರದು. ನಾಮಿನೇಷನ್ ಹೋಗಬೇಕು. ಎಂಬುದು ನನ್ನ ಅಭಿಪ್ರಾಯ. ನನ್ನ ಸರ್ಕಾರ ಇದ್ದಾಗ ಸಾಕಷ್ಟು ಪ್ರಾಮಾಣಿಕವಾಗಿ ಹೋಗಬೇಕು ಎಂಬ ಪ್ರಯತ್ನ ಮಾಡಿದ್ದೇವೆ. ಏಕೆಂದರೆ ಈ ನಾಮಿನೇಷನ್ನಿಂದ ಇವತ್ತು ಚುನಾವಣೆಗೆ ಮಹತ್ವ ಉಳಿದಿಲ್ಲ. ಚುನಾವಣೆಯಲ್ಲಿ ಆರಿಸಿ ಬರಬಹುದು. ಐದಾರು ನಾಮಿನೇಷನ್ ಮಾಡಿ ಚುನಾವಣೆಯಲ್ಲಿ ತೀರ್ಪು ಬಂದಿದೆ. ಅದಕ್ಕೆ ಒಂದು ಮಹತ್ವ ಇದೆ. ಆ ದೃಷ್ಟಿಯಿಂದ ತಾವು ನನಗೆ ಭರವಸೆ ಕೊಡಬೇಕಾಗುತ್ತದೆ. 15 ದಿವಸದೊಳಗೆ ಚುನಾವಣೆ ಮಾಡುತ್ತೇವೆಂದು ಏನು ಪ್ರಾವಿಜನ್ ಇದೆ, 29(4) ಒಳಗೆ ಆ ಪ್ರಕಾರ ಚುನಾವಣೆ ಮಾಡುತ್ತೇವೆಂಬ ಭರವಸೆ ಕೊಡಬೇಕು. ಎರಡನೆಯದು ಸೆಕ್ಷನ್ 53 ಅಥವಾ 29 (ಸಿ) ಅದನ್ನು ರಿವೋಕ್ ಮಾಡಬಹುದು ಅದು ಯಾವುದನ್ನು ರಿವೋಕ್ ಮಾಡುತ್ತೀರೋ ಅದನ್ನು ಮಾಡಿ ಯಾವ ಪ್ರಕಾರ ಮಾಡುತ್ತೇವೆ ಎಂಬ ಭರವಸೆ ನನಗೆ ಬೇಕಾಗಿದೆ.

+ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ): ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಈಗಾಗಲೇ ಏನು ಹೇಳಿದ್ದಾರೆ ಅದನ್ನು ನಾನು ಪುನಃ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ನಾವು ಸರ್ಕಾರಕ್ಕೆ ಏತಕ್ಕಾಗಿ ಈ ಒಂದು ಗಮನ ಸೆಳೆಯುವ ಸೂಚನೆ ಕಳಿಸಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ತಾವು ಒಂದು ಮಾತನ್ನು ಹೇಳಿದ್ದೀರಿ. ನನಗೆ ಗೊತ್ತು, ನೀವು ಯಾವುದೇ ಕಾನೂನನ್ನು ಉಲ್ಲಂಘನೆ ಮಾಡುವುದರಲ್ಲಿ ಪ್ರವೀಣರು ಎಂದು ಈ ಮಾತನ್ನು ಹೇಳಿದಾಗ ನಿಮಗೆ ನೋವು ಆಗಬಹುದು. ಆದರೆ ಇದಕ್ಕೆ ನಿದರ್ಶನವನ್ನು ಕೊಡಬಹುದು. ನೀವು ಮೊನ್ನೆ ಗುಬ್ಬಿ ಪ್ರಾಥಮಿಕಕ ಭೂ ಅಭಿವೃದ್ಧಿ ಬ್ಯಾಂಕಿಂಗ್ ನಾಮಿನೇಟ್ ಮಾಡಿದಿರಿ. ಸರ್ಕಾರದ ಕೈಚಳಕ ಹೇಗಿದೆ ಎನ್ನುವುದಕ್ಕೆ ಒಂದು ಉದಾಹರಣೆಗೆ ಹೇಳುತ್ತಿದ್ದೇನೆ. ಅಲ್ಲಿ ಐದು ಜನರನ್ನು ನಾಮಿನೇಟ್ ಮಾಡಿದ್ದೀರಿ. ಮೂರು ಜನರನ್ನು ನಾಮಿನೇಟ್ ಮಾಡುವುದಕ್ಕೆ ಬರುತ್ತದೆ ಎಂದು ತಮಗೆ ಗೊತ್ತಿತ್ತು. ಆದರೂ ಐದು ಜನರನ್ನು ನಾಮಿನೇಟ್ ಮಾಡಿ ಕಳಿಸಿದಿರಿ. ಎಲೆಕ್ಷನ್ನಲ್ಲಿ ಒಂದು ಮತ ನಿಮಗೆ ಕಮ್ಮಿ ಇತ್ತು, ಗೆದ್ದಿರಿ , ಗೆದ್ದ ತಕ್ಷಣ ತಾವು ಜನತಂತ್ರ ವಾದಿಗಳು ಆದಿರಿ. ಕಾನೂನು ಪ್ರಕಾರ ಮಾಡಿಲ್ಲ ಎಂದು ವಾಪಸ್ಸು ತೆಗೆದುಕೊಂಡಿರಿ. ಈ ಮೋಸವನ್ನು, ಈ ವಂಚನೆಯನ್ನು ಮಾಡಬೇಡಿ. ಇದು ಯಾವುದಕ್ಕೂ ಹೇಸದಂತಹ ಸರ್ಕಾರ ಎನ್ನುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ನಾನು ನಿಮಗೆ ಕೇಳುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ಕರ್ನಾಟಕ ಹೈಕೋರ್ಟಿನಲ್ಲಿ ಏನು ತೀರ್ಮಾನ ಆಗಿದೆ. ಈ ತೀರ್ಮಾನಕ್ಕೆ ವಿರುದ್ಧವಾಗಿ ನೀವು ನಡೆದುಕೊಳ್ಳಬಾರದು ಎಂಬುದನ್ನು ನಾನು ಮೊಟ್ಟಮೊದಲನೆಯದಾಗಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ತೀರ್ಮಾನವನ್ನು ಗಮನಕ್ಕೆ ತಂದ ಮೇಲೆ ತಾವು ಮಾಡಿದರೆ ನೀವು ದುರುದ್ದೇಶದಿಂದ ಮಾಡಿದ್ದೀರಿ ಎಂಬ ಮಾತನ್ನು ಅನಂತರ ಆದರೂ ನಾವು ಹೇಳುವುದಕ್ಕೆ ಅವಕಾಶ ಇರಲಿ ಎಂಬ ದೃಷ್ಟಿಯಿಂದ ನಾವು ಇದನ್ನು ತಂದಿದ್ದೇವೆ. ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೇನೇ ತಾವು ಆಶ್ವಾಸನೆ ಕೊಡಬೇಕು. ಏನೆಂದರೆ, ಈ ಒಂದು ಚುನಾವಣೆಯನ್ನು ಹೇಳಿದ ಹಾಗೇನೇ ತಾವು ಆಶ್ವಾಸನೆ ಕೊಡಬೇಕು. ಏನೆಂದರೆ, ಈ ಒಂದು ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ ಎಂದು. ಮತ್ತು ಈಗ ಬೈಲಾ ಪ್ರಕಾರ ಮಾಡಬೇಕು ಎಂದು ಹೊರಟಿದ್ದೀರಿ, ಮಾಡಬೇಕು ಎಂದರೆ ಮಾಡಿ; ನಮ್ಮದೇನೂ ತಕರಾರು ಇಲ್ಲ. ಬೈಲಾದಲ್ಲಿ ಅವಕಾಶ ಇದೆ ಮಾಡಿ. ಆದರೆ ಆ

ಬೈಲಾ ಏನು ಇದೆ. ಅದು ಸೆಕ್ಷನ್ 29(ಸಿ) ಅನ್ನು ರಿಫ್ಲೆಕ್ಟ್ ಮಾಡುತ್ತದೆ. 29(ಸಿ) ಒಳಗೆ ಏನು ಇದೆ, ಅದೇ ಬೈಲಾದಲ್ಲಿ ಇದೆ. ತಾವು ಬೈಲಾದಲ್ಲೂ ಮಾಡುತ್ತೇವೆ. ಸೆಕ್ಷನ್ 53 ನಲ್ಲೂ ಮಾಡುತ್ತೇವೆ ಎಂದು ಹೇಳಿದಿರಿ. ನೀವು ಏತಕ್ಕೂ ಹೇಸುವಂತಹ ಜನ ಎಂದು ನಾನು ಆಗಲೇ ಹೇಳಿದ್ದೇನೆ. ಅದಕ್ಕೋಸ್ಕರವಾಗಿ ನಾನು ಸ್ಪಷ್ಟವಾಗಿ ನೇರವಾಗಿ ಕೇಳುತ್ತಿದ್ದೇನೆ. ಸರ್ಕಾರ ಕಾನೂನು ಪ್ರಕಾರ ನಡೆದುಕೊಳ್ಳುತ್ತದೆ. ನಾನು ಸಚಿವನಾಗಿರುವವರೆಗೆ ಕಾನೂನು ಪ್ರಕಾರ ನಡೆದುಕೊಳ್ಳುತ್ತೇನೆ ಎಂದು ತಾವು ಸದನದಲ್ಲಿ ಆಶ್ವಾಸನೆ ಕೊಡಬೇಕು. ಇಲ್ಲ, ಇಲ್ಲಿ ನೀವು ಏನಾದರೂ ಹೇಳಿ, ನಾವು ಇಷ್ಟ ಬಂದ ಹಾಗೆ ಮಾಡುತ್ತೇವೆ ಎಂದು ಹೇಳಿದರೆ, ಆ ಮಾತನ್ನಾದರೂ ಸಹ ಧೈರ್ಯವಾಗಿ ಸದನದ ಮುಂದೆ ಹೇಳಿ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಮಾನ್ಯ ನಾಯಕರು ಹೇಳಿದ್ದಾರೆ. ನಾನು ಎರಡು ಪ್ರಶ್ನೆಗಳನ್ನು ಮಂತ್ರಿಗಳಿಗೆ ಕೇಳುತ್ತೇನೆ. ಸವದತ್ತಿ ನೂಲಿನ ಗಿರಣಿಗೆ ಈ ಹಿಂದೆ ಇವರು ಈ ಕಾನೂನಿಗೆ ವಿರುದ್ಧವಾಗಿ ನಾಮಕರಣ ಮಾಡಿದರು. ನಮಗೆ ಏನು ಸಂಶಯ ಇದೆ ಎಂದರೆ 10 ಜನರನ್ನು ಇವರು ಡೈರೆಕ್ಟರ್ ಮಾಡುತ್ತೇವೆ ಎಂದು ಹೇಳಿ ಈಗಾಗಲೇ ನಿರ್ಣಯ ಆಗಿದೆ.

ಶ್ರೀ ಹೆಚ್. ವಿಶ್ವನಾಥ್: ಗೆಲ್ಲುವುದಕ್ಕೆ ಎಷ್ಟು ಜನ ಬೇಕೋ ಅಷ್ಟು ಮಾಡುತ್ತಾರೆ.

+ ಶ್ರೀ ಪಿ.ಸಿ. ಸಿದ್ದನಗೌಡರ್: ಎಷ್ಟು ಕಡಿಮೆ ಬೀಳುತ್ತದೆ ಅಷ್ಟು ಜನರಿಗೆ ಮಾಡಬೇಕು ಎಂದು ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮಂತ್ರಿಗಳ ಹೇಳಿಕೆ ಪ್ರಕಾರ ಬೈಲಾ ಮತ್ತು ಆಕ್ಟ್ ಇರುವುದಿಲ್ಲ. ಹೈಕೋರ್ಟ್ ಆರ್ಡರ್ ನಾವು ಮೀರುವುದಿಲ್ಲ ಎನ್ನತಕ್ಕ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಮ್ಮ ನಾಯಕರು ಹೈಕೋರ್ಟ್ ರೂಲಿಂಗನ್ನು ಕ್ವೋಟ್ ಮಾಡಿಕೊಟ್ಟಿದ್ದಾರೆ. ಅದಕ್ಕೆ ನಿರ್ದಿಷ್ಟವಾದ ಹೇಳಿಕೆಯನ್ನು ಮಾನ್ಯ ಸಚಿವರು ಕೊಡದೇ ಇದ್ದರೆ ನಾಳೆ ಇವರು ಚುನಾವಣೆಯನ್ನು ಮುಂದಕ್ಕೆ ಹಾಕುತ್ತಾರೆ ಎನ್ನುವ ಭಯದ ವಾತಾವರಣ ಇದೆ. ಅದೂ ಅಲ್ಲದೇ ಅಲ್ಲಿ ಕಾನೂನು ವ್ಯವಸ್ಥೆ ಹದಗೆಡುತ್ತಿದೆ ಎನ್ನತಕ್ಕ ಸಾರ್ವತ್ರಿಕ ವಿಷಯ ಎಲ್ಲರಿಗೂ ಗೊತ್ತಿದೆ. ಇದಕ್ಕೆ ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಿರ್ದಿಷ್ಟವಾದ ಹೇಳಿಕೆಯನ್ನು ಮಾನ್ಯ ಸಚಿವರು ಈ ಒಂದು ಶುಗರ್ ಫ್ಯಾಕ್ಟರಿ ವಿಷಯದಲ್ಲಿ ಕೊಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ.

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಚಿವರನ್ನು ನಾನು ಕೇಳುವುದಿಷ್ಟೆ. ಏನೆಂದರೆ, ಸಹಕಾರ ಸಂಘದ ಪದ್ಧತಿಯಲ್ಲಿ ನಾಮಿನೇಷನ್ ಎಂಬುದು ಇರಕೂಡದು. ಈ ಬಗ್ಗೆ ಹಿಂದೆ ಶ್ರೀ ಕೆ.ಎಚ್. ಪಾಟೀಲರು ಒಂದು ತಿದ್ದುಪಡಿ ಪ್ರಸ್ತಾವ ತಂದಿದ್ದರೂ ಇವೊತ್ತಿನವರೆವಿಗೂ ಅದು ತಿದ್ದುಪಡಿಯಾಗಿಲ್ಲ; ಅದು ಧೂಳು ತಿನ್ನುತ್ತಿದೆ. ಅದು ಯಾವತ್ತು ತಿದ್ದುಪಡಿಯಾಗುತ್ತದೋ ಗೊತ್ತಿಲ್ಲ. ಸಹಕಾರ ಸಂಘಗಳು ಪ್ರಜಾಪ್ರಭುತ್ವಕ್ಕನುಗುಣವಾಗಿ ಸರಿಯಾಗಿ ನಡೆದುಕೊಂಡು ಹೋಗಬೇಕು. ಸಹಕಾರ ಸಂಘಗಳ ಚುನಾವಣೆಗಳಲ್ಲಿ ಜನರ ಪ್ರತಿನಿಧಿಗಳೇ ಆರಿಸಿ ಬರಬೇಕು. ಇದು ಬಿಟ್ಟು ನಾಮಿನೇಷನ್ ಮಾಡುವ ಮೂಲಕ ಅವರನ್ನು ತಂದು ತಲೆ ಮೇಲೆ ಕೂರಿಸುವ ಪದ್ಧತಿ ಬೇಡ. ಸಹಕಾರ ಸಂಘಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಬೇಕಾದರೆ ಅದರಲ್ಲಿ ರಾಜಕೀಯ ಇರಕೂಡದೆಂದು ಹೇಳುತ್ತಿದ್ದೇನೆ. ಆದರೆ, ರಾಜಕೀಯ ಪುನಃ ಬರುತ್ತಿದೆ. ಅದನ್ನು ತಪ್ಪಿಸಲು ಕಾನೂನು ಬದ್ಧವಾಗಿ ಚುನಾಣೆಗಳನ್ನು ನಡೆಸುತ್ತೇವೆಂದು ತಾವು ಹೇಳಿ. ಚುನಾವಣೆಗಳನ್ನು ಕಾನೂನುಬದ್ಧವಾಗಿ

ಅಂದರೆ ಸೆಕ್ಷನ್ 53ರ ಪ್ರಕಾರ ನಡೆಸುತ್ತೀರೋ ಅಥವಾ ಸೆಕ್ಷನ್ 29ರ ಪ್ರಕಾರ ನಡೆಸುತ್ತೀರೋ ಎಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ನಮ್ಮ ಮನಸ್ಸಿಗೆ ಬಂದಂತೆ ನಾವು ಚುನಾವಣೆಗಳನ್ನ ನಡೆಸುತ್ತೇವೆ, ನಮ್ಮಲ್ಲಿ ಯಾವುದೇ ಕಾನೂನು ಇಲ್ಲ ಅನಂತರ ಕಾಯಿದೆ ನೋಡಿ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿಬಿಡಿ, ಪರವಾಗಿಲ್ಲ. ಈಗ ನೀವು ಗುಬ್ಬಿಯಲ್ಲಿ ಮಾಡಿದ್ದೀರಲ್ಲಾ! ನೀವು ರಾಜ್ಯದ ಎಲ್ಲಾ ಕಡೆ ಹಾಗೇ ಮಾಡುತ್ತಿದ್ದೀರಿ. ಬರೀ ಒಂದು ಕಡೆ ಮಾತ್ರವಲ್ಲ. ಅಲ್ಲಿ ಕಾನೂನು ರೀತ್ಯ ಐದು ಜನರನ್ನು ಆಯ್ಕೆ ಮಾಡಿ ಎಂದರೆ ಎಂಟು ಜನರನ್ನು ಆಯ್ಕೆ ಮಾಡುವುದು. ಇಂತಹ ಪದ್ಧತಿ ಏಕೆ? ಈ ಪದ್ಧತಿ ಸರಿಯಿಲ್ಲ. ಈ ರೀತಿ ಚುನಾವಣೆಯನ್ನು ನಡೆಸುತ್ತೇವೆಂದು ತಾವು ನಿರ್ದಿಷ್ಟವಾಗಿ ಹೇಳಿ, ಪರವಾಗಿಲ್ಲ ಇಲ್ಲವೇ ನೀವು ಬೇಕಾದ್ದು ಹೇಳಿ ನಾವು ಹಾಗೇ ಮಾಡುತ್ತೇವೆಂದರೆ ಸಂತೋಷ. ತಾವು ಚುನಾವಣೆಯನ್ನು ಮುಂದೂಡಬಾರದು. ಆದ್ದರಿಂದ, ಚುನಾವಣೆಯನ್ನು ಸೆಕ್ಷನ್ 53ರ ಪ್ರಕಾರ ಮಾಡುತ್ತೀರಾ? ಅಥವಾ ಸೆಕ್ಷನ್ 29ರ ಪ್ರಕಾರ ಮಾಡುತ್ತೀರಾ? ಎಂಬುದರ ಬಗ್ಗೆ ತಾವು ಧೈರ್ಯವಾಗಿ ಹೇಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈ ನಾಮಿನೇಷನ್ ಮಾಡುವುದಿಲ್ಲ, ಕಾನೂನುಬದ್ಧವಾಗಿ ಮಾಡುತ್ತೇವೆಂದು ಸಹಕಾರ ಮಂತ್ರಿಗಳು ಹೇಳುತ್ತಾರೆ. ಸಹಕಾರ ಮಂತ್ರಿಗಳು ಈಗ ಸದನಕ್ಕೆ ಬಂದಿದ್ದಾರೆ. ಅವರನ್ನು ಈಗಾಗಲೇ ಖುದ್ದು ಭೇಟಿ ಮಾಡಿ ವೈಯಕ್ತಿಕವಾಗಿ ಈ ವಿಷಯ ತಿಳಿಸಿದ್ದೇನೆ. ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಏಕೆ ನಾವು ಇಷ್ಟಪಟ್ಟಿದ್ದೇವೆಂದರೆ ಕಾನೂನು ರೀತ್ಯ ಕೆಲಸ ಮಾಡುತ್ತೇವೆಂದು ಹೇಳುತ್ತಾ ಸರ್ಕಾರ ಕಾನೂನುಬಾಹಿರವಾಗಿ ಕೆಲಸ ಮಾಡುತ್ತಾ ಬಂದಿರುವುದನ್ನು ಈ ಸದನ ಮತ್ತು ನಾಡಿನ ಜನತೆ ಗಮನಿಸಿರುವುದರಿಂದ ಇದರ ಬಗ್ಗೆ ಸರ್ಕಾರದಿಂದ ನಿರ್ದಿಷ್ಟ ಉತ್ತರ ಪಡೆಯಬೇಕೆಂಬ ಇಚ್ಛೆಯಿಂದ ಪ್ರಸ್ತಾಪಿಸುತ್ತಿದ್ದೇವೆ. ಇದೇ ಸರ್ಕಾರ ಇರಬಹುದು. ಇಲ್ಲವೆ ಬದಲಾಗಬಹುದು. ಆದರೆ, ಸಹಕಾರಿ ಕ್ಷೇತ್ರದಲ್ಲಿ ಚುನಾಯಿತ ಪ್ರತಿನಿಧಿಗಳು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗದಂತೆ ನಾಮಿನೇಷನ್ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡುವಂಥ ಪದ್ಧತಿ ಹೋಗಬೇಕನ್ನುವುದನ್ನು ಈ ಸದನದ ಬಹುತೇಕ ಎಲ್ಲಾ ಸದಸ್ಯರು ಒಪ್ಪುತ್ತಿದ್ದಾರೆ. ಈಗ 18 ಜನರಲ್ಲಿ ಉಪಾಧ್ಯಕ್ಷರ ಚುನಾವಣೆ ನಡೆಸುವುದಕ್ಕೆ ಸರ್ಕಾರ ಸಿದ್ಧವಿಲ್ಲ, ಕಳೆದ ಮೂರು ವರ್ಷಗಳಿಂದ ಸರ್ಕಾರ ಚುನಾವಣೆ ನಡೆಸಿಲ್ಲ. ಈ ಕುರಿತು 10-20 ಜನರು ಹೈಕೋರ್ಟಿಗೆ ರಿಟ್ ಪಿಟಿಷನ್ ಹೋಗಿ, ಅದಕ್ಕೆ ಹೈಕೋರ್ಟ್ ನಿರ್ದೇಶನ ಕೊಡಿಸಿದ ನಂತರ ಮತ್ತೆ ಸರ್ಕಾರ ಅಪೀಲ್ ಹೋಗಿದ್ದು, ಅದು ಸರ್ಕಾರದ ವಿರುದ್ಧವಾದ ನಂತರ ಈ ಚುನಾವಣೆ ನಡೆಸುವುದಕ್ಕೆ ಸರ್ಕಾರ ಸಿದ್ಧವಾಯಿತು. ಜನವರಿ 30ನೇ ತಾರೀಖು ನಡೆದಂಥ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 18 ಜನರ ಪೈಕಿ ಸರ್ಕಾರದ ಪರವಾಗಿ ಇದ್ದಂಥವರು ಕೇವಲ ಮೂರು ಜನ ಮಾತ್ರ; ಅವರು ಮಾತ್ರ ಅಲ್ಲಿ ಆಯ್ಕೆಯಾಗಿದ್ದಾರೆ. ಚುನಾವಣಾ ಸಮಯದಲ್ಲಿ ಸಕ್ಕರೆ ಮಂತ್ರಿಗಳು, ಜಿಲ್ಲಾ ಮಂತ್ರಿಗಳು ಹಾಗೂ ಶಾಸಕರುಗಳು ಬಂದಿದ್ದರು. ಆದರೂ ಕಬ್ಬು ಬೆಳೆಗಾರರು ಮಾತ್ರ ಸರ್ಕಾರದ ಈ ಒಂದು ನೀತಿಯನ್ನು ಖಂಡಿಸಿದರು. ಅಲ್ಲಿರುವ ಮಿಲ್ ಇವೊತ್ತಿನ ದಿವಸ ದಿವಾಳಿಯೇಳುವ ಕೊನೇ ಹಂತದಲ್ಲಿದೆ. ಆದುದರಿಂದ, ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಚುನಾವಣೆಯನ್ನು ಅಕ್ಷನ್ 29ರ ಪ್ರಕಾರ ಇಲ್ಲವೆ 53ರ ಪ್ರಕಾರ ನಡೆಸುತ್ತೀರೋ? ಅಥವಾ ಎರಡನ್ನೂ ಸೇರಿಸಿ ಮೂರು ಜನ ಇದ್ದವರನ್ನು 15 ಜನರನ್ನಾಗಿ ಆಯ್ಕೆ ಮಾಡುವುದಕ್ಕೆ ಇನ್ನೆಷ್ಟು ಜನರನ್ನು ನಾಮಿನೇಷನ್ ಮಾಡಬೇಕು? ಸರ್ಕಾರಕ್ಕೆ ನೀತಿ-ನಿಯಮಗಳೇನಾದರೂ ಇದೆಯೇ? ಇವೊತ್ತು 15 ಜನರನ್ನು ಆಯ್ಕೆ ಮಾಡುತ್ತಿದ್ದೀರಿ,ಚುನಾವಣೆಯಲ್ಲಿ ಅವರು ಸೋತಿದ್ದಾರೆ. ಹೀಗಿದ್ದರೂ ಅಷ್ಟೇ ಸಂಖ್ಯೆಯ ನಾಮಿನೇಷನ್ ಮಾಡಿದರೆ ಬರುವ ಸೋಮವಾರ ಚುನಾವಣೆ ಇದೆ. ಆಗ ತಮಗೆ

ಬೇಕಾದಂಥ ಮೂರು ಜನರ ಪೈಕಿ ಒಬ್ಬರನ್ನು ಛೇರ್ಮನ್ನಾಗಿ ಮಾಡಿ ಮತ್ತೊಬ್ಬರನ್ನು ವೈಸ್ ಛೇರ್ಮನ್ನರನ್ನಾಗಿ ಮಾಡಿ, ಮರು ದಿವಸ ಇದು ಕಾನೂನಿಗೆ ವಿರುದ್ಧವಿರುವುದರಿಂದ ಅವರನ್ನೆಲ್ಲಾ ಕಡಿಮೆ ಮಾಡುತ್ತೇವೆನ್ನುವ ತಂತ್ರವನ್ನು ಸರ್ಕಾರ ಬಿಡಬೇಕು. ಸ್ವಚ್ಛವಾದ ಆಡಳಿತ ಕೊಡುತ್ತೇವೆ, ದಕ್ಷತೆಯಿಂದ ನಡೆಸುತ್ತೇವೆಂದು ಹೇಳುವಂಥ ಮಂತ್ರಿಗಳು ದಯವಿಟ್ಟು ಕೇಳಬೇಕು. ಏನೆಂದರೆ, ಚುನಾವಣೆಯನ್ನು ಸೆಕ್ಷನ್ 29 ಅಥವಾ 53ರ ಮೇರೆಗೆ ನಡೆಸುತ್ತೇವೆ ಮತ್ತು ಮಂಡಳಿಯ ಮೂರನೇ ಒಂದರಷ್ಟು ಸಂಖ್ಯೆಯ ಅಂದರೆ ಆರು ಜನರಿಗಿಂತ ಹೆಚ್ಚು ಜನರನ್ನು ನಾಮಿನೇಷನ್ ಮಾಡುವುದಿಲ್ಲವೆಂದು, ನಂತರ ಸೋಮವಾರ ನಡೆಸತಕ್ಕಂಥ ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲವೆನ್ನುವ ಭರವಸೆಯನ್ನು ತಾವು ಈ ಸದನಕ್ಕೆ ನೀಡಬೇಕು. ಇನ್ನೊಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಸೂಚನೆ ಕೊಡುವುದೇನೆಂದರೆ, ಈಗ ನಡೆಸುವ ಚುನಾವಣೆಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನಾಗಿ ಮಾಡುವುದಕ್ಕೆ ಸರ್ಕಾರ ಅವಕಾಶ ಕೊಡದೆ ತಮಗೆ ಬೇಕಾದಂಥ ಹಸ್ತಕರನ್ನು ಇವ್ಹೊತ್ತು ಹೆಚ್ಚು ಮಾಡಿದ್ದೇ ಆದರೆ ಅಲ್ಲಿ ರೈತರು ಸಹಸ್ರ ಸಂಖ್ಯೆಯಲ್ಲಿ ಸೇರಿ ಸರ್ಕಾರದ ಈ ಅಪಕೃತ್ಯ ಖಂಡಿಸಿ ಚಳುವಳಿ ಮಾಡದೆ ಬಿಡುವುದಿಲ್ಲ. ಎಲ್ಲಾ ಭಾಗದ ರೈತರು ಅವತ್ತು ಅಲ್ಲಿ ಉದ್ಭವಿಸತಕ್ಕ ಜನ ಸಮೂಹ, ಲಾ ಅಂಡ್ ಆರ್ಡರ್ ಸಮಸ್ಯೆಯನ್ನು ಸರ್ಕಾರವೇ ಸೃಷ್ಟಿ ಮಾಡಿದಂತಾದೀತು. ಅಲ್ಲಾಗತಕ್ಕಂಥ ಅನಾಹುತಕ್ಕೆ ಮಂತ್ರಿಗಳೇ ಜವಾಬ್ದಾರರಾಗುತ್ತಾರೆ. ಸರ್ಕಾರವೇ ಇದನ್ನು ನೆನಪಿಸಿಕೊಂಡು ಕಾನೂನು ಸುವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕೆ, ಆ ಸಕ್ಕರೆ ಕಾರ್ಖಾನೆಯ ಅಭಿವೃದ್ಧಿಗಾಗಿ ಜನರ ಪ್ರತಿನಿಧಿಗಳು ಇವತ್ತು ಅಲ್ಲಿ ಚುನಾಯಿತರಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಲು ಕಾನೂನು ಬದ್ಧವಾಗಿ ಮಾತ್ರ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

+ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕ ನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಇದು ಪ್ರಿಮೆಚೂರ್ ಆಗಿದೆ. ಇದು ಏನೂ ಕಾರಣ ಇಲ್ಲದೆ ರೈಸ್ ಮಾಡಿದ್ದೇವೆಂಬುದು ನಮಗೆಲ್ಲರಿಗೂ ಅರ್ಥವಾಗಿದೆ. ಆದರೆ, ಸತ್ಯ ನಿಮ್ಮ ಮೇಲೆ ನಂಬಿಕೆ ಕೂಡ ಅಷ್ಟೇ ಹುಸಿಯಾಗಿದೆ. ಈಗಾಗಲೇ ರಾಜ್ಯದಲ್ಲಿ ಸೋತು ಹೋಗಿದ್ದವರಲ್ಲಿ ಅನೇಕರನ್ನು ಬೋರ್ಡ್ ಆಫ್ ಡೈರೆಕ್ಟರ್ ಎಂದು ಮಾಡಿದ್ದೀರಿ. ಆ ಸಂಸ್ಥೆಗಳನ್ನೆಲ್ಲ ಮುಳುಗಿಸಲು ಬಿಟ್ಟಿದ್ದೀರಿ. ಈಗ ಸಕ್ಕರೆ ಸಚಿವರಿಗೇ ಈ ಸಕ್ಕರೆ ಕಾರ್ಖಾನೆ ಬೇಕಾಗಿದೆ. ಅದಕ್ಕೆ ನೇರವಾಗಿ ನೀವೇ ಕೈಹಾಕಲು ಹೋಗಿಬಿಟ್ಟಿದ್ದೀರಿ. ಅದನ್ನು ಏನಾದರು ಮಾಡಿ ನನ್ನ ಕೈಗೆ ತೆಗೆದುಕೊಳ್ಳಬೇಕು,ಅದು ನನ್ನ ಕೈಕೆಳಗೆ ಇರಬೇಕು ಎಂದು, ಪಾಪ ಸೋತು ಇಲ್ಲಿ ಬಂದುಬಿಟ್ಟಿದ್ದೀರಿ. ತಾವು ಅದನ್ನು ಸುಮ್ಮನೆ ಬಿಡುವುದಿಲ್ಲವೆಂದು ನಮಗೆ ಅರ್ಥವಾಗಿಬಿಟ್ಟಿದೆ. ಇದನ್ನು ತಾವು ಮಾಡಲು ಬರುವುದಿಲ್ಲ. ಬೈಲಾದಲ್ಲಿ ಎಷ್ಟು ಡೈರೆಕ್ಟರ್‌ಗಳನ್ನು ಮಾಡಬಹುದೆಂದು ಪ್ರಾವಿಜನ್ ಇದೆ, ಅದು ತಮ್ಮ ಸೆಕ್ಷನ್ 29ಸಿನ ಪ್ರಕಾರ ಇದೆ. ಇಲ್ಲದಿದ್ದರೆ ನಿಮ್ಮ ಇನ್‌ವೆಸ್ಟ್‌ಮೆಂಟ್ ಮೇಲೆ ಮಾಡುವುದಾದರೆ, ಸೆಕ್ಷನ್ 53ರ ಮೇಲೆ 5 ಜನರನ್ನೋ ಅಥವಾ ಮೂರನೇ ಒಂದು ಭಾಗವನ್ನೋ ನೀವು ಮಾಡಬಹುದೆಂದಿದೆ. ಇದನ್ನು ಮೀರಿ ನಾವು ಮಾಡುವುದಿಲ್ಲವೆಂದು ತಮ್ಮಿಂದ ಕಮಿಟ್‌ಮೆಂಟ್ ಬೇಕಾಗಿದೆ. ತಾವು ಹುಷಾರಾಗಿ ಮಾಡುತ್ತೀರೆಂದು ಹೇಳಿದ್ದೀರಿ, ಮಾಡುವುದಿಲ್ಲವೆಂದು ಹೇಳಿಯೇ ಇಲ್ಲ. ತಯಾರಿಯನ್ನು ತೆಗೆದುಕೊಂಡಿದ್ದೀರಿ. ತಾವು ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಈ ರಾಜ್ಯದಲ್ಲಿ ಕಾನೂನನ್ನು ಏನಾದರೂ ಪಾಲನೆ ಮಾಡುವುದನ್ನು ನೋಡಿಕೊಂಡು ಹೋಗಬೇಕಾಗುತ್ತದೆ. ಹೈಕೋರ್ಟ್ ಹೇಳುತ್ತಿದೆ.ಅಂಡರ್ ಸೆಕ್ಷನ್ ಬೈಲಾ ಇಸ್ ಕನ್‌ಸ್ಟ್ರಕ್ಟಿಡ್. ಬೇರೆ ಏನೂ ಇಲ್ಲ. ತಮ್ಮ ಕೋ-ಅಪರೇಟಿವ್ ಕಾಯಿದೆಯ ಕೆಳಗೆಯೇ ನಾವು ಬೈಲಾ ಪ್ರಾವಿಜನ್ ಪ್ರಕಾರ ಇಷ್ಟು ಜನ ಡೈರೆಕ್ಟರ್‌ಗಳು ಇರಬೇಕೆಂದು ಮಾಡಬಹುದು. ಅದನ್ನು ಮಾಡಿ. ಇಲ್ಲದಿದ್ದರೆ ಸೆಕ್ಷನ್ 53ರಲ್ಲಿ ಮಾಡಿ. ತಾವು ಗುಬ್ಬಿಯಲ್ಲಿ ಏನು ಮಾಡಿದ್ದೀರಿ?

5 ಜನರನ್ನು ನಾಮಿನೇಟ್ ಮಾಡಿಬಿಟ್ಟರಿ, ನಾಮಿನೇಟ್ ಮಾಡಿದವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದಿರಿ, ಮರುದಿನ ಅದನ್ನು ವಿಥ್‌ಡ್ರಾ ಮಾಡಿದಿರಿ. ಹಾಲು ಮಹಾ ಮಂಡಲಿಗೆ ಏನು ಮಾಡಿದಿರಿ ಎಂದರೆ ನಾಮಿನೇಟ್ ಮಾಡಿದಿರಿ. ಯಾರೋ ತಮಗೆ ಸ್ವಲ್ಪ ತಿರುಗಿ ಮಾತನಾಡಿದ ಎಂದು ತೆಗೆದು ಹಾಕಿದಿರಿ, ಮತ್ತೆ ಹಾಕಿದಿರಿ, ಯೂನಿಯನ್‌ಗಳಿಗೆ ಏನು ಮಾಡಿದಿರಿ, ನಾಮಿನೇಟ್ ಮಾಡುವುದು ತೆಗೆದುಹಾಕುವುದು ಬಿಲ್ ಕೊಡಲು ಯೋಗ್ಯತೆ ಇಲ್ಲದಿದ್ದರೆ ಹೋಗಲಿ, ಡೈರೆಕ್ಟರ್‌ಗಳನ್ನು ಮಾತ್ರ ತುಂಬುತ್ತಿದ್ದೀರಿ, ನನ್ನ ಸರ್ಕಾರ, ನಾನು ಸರ್ಕಾರ, ನನ್ನ ಬಂಡವಾಳ ಇಷ್ಟಿದೆ, ನಾನೇನೋ ಭಾರಿ ನಿಮಗೆ ತುಂಬಿಕೊಟಿದ್ದೇನೆ ಎಂದು ಏಕೆ ಈ ಶಾಪ.ಇನ್ನೊಂದು ಕಡೆ ತಾವು ಕುಳಿತುಕೊಂಡು ಹೇಳುತ್ತಿದ್ದೀರಿ ನಾಮಿನೇಷನ್ ರದ್ದು ಮಾಡಬೇಕು. ಆಕಸ್ಮಾತ್ ಮಾಡಿದರೂ ಅಧಿಕಾರಿಗಳು ಇರಬೇಕು,ಓಟಿಂಗ್ ರೈಟ್ ಇರಕೂಡದು, ಅರ್ಧನಾರೀಶ್ವರನ ರಿಪೋರ್ಟ್‌ನ್ನು ಒಪ್ಪಿಕೊಂಡಿದ್ದೇವೆ, ನಾವು ಸೆಂಟ್ರಲ್ ಆಕ್ಟ್‌ಕೆಳಗಡೆ ಕಾಯಿದೆಯನ್ನು ಮಾಡುತ್ತೇವೆನ್ನುವವರು, ಇಲ್ಲಿ ಶಾಸನದ ಕೆಳಗೆ ನಾಮಿನೇಟ್ ಮಾಡುತ್ತೇವೆಂದು ತಾವು ಹೇಳಿರುವುದರಿಂದ ನಮಗೆ ಅನುಮಾನಕ್ಕೆ ಆಸ್ಪದವಿದೆ, ದಯಮಾಡಿ ಸ್ಪಷ್ಟವಾಗಿ ಹೇಳಬೇಕು. ತಾವು ನಾಮಿನೇಷನ್ ಮಾಡುವುದಾದರೆ ಯಾವ ರೀತಿ ಮಾಡುತ್ತೀರಿ? ಅದನ್ನು ಬೈಲಾದ ಪ್ರಕಾರ ಮಾಡುತ್ತೀರೊ ಸೆಕ್ಷನ್ 29 (ಸಿ) ಕೆಳಗೆ ಮಾಡುತ್ತೀರೋ ಅಥವಾ ಸೆಕ್ಷನ್ 53 ಕೆಳಗೆ ಮಾಡುತ್ತೀರೋ ದಯಮಾಡಿ ಅವರು ಯಾರು ಎಂದೂ ಹೇಳಬೇಕು.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ ಚುನಾವಣೆ ಬಹಳ ಮಹತ್ವವಾಪಂಥ ಘಟ್ಟ. ಸಂಗೂರು ಸಕ್ಕರೆ ಕಾರ್ಖಾನೆಗೆ ಈಗ ಚುನಾವಣೆಯಾಗಿದೆ. ಆ ಚುನಾವಣೆಯನ್ನು ಸ್ವಲ್ಪ ದಿನದವರೆಗೆ, ಮೂರು ವರ್ಷಗಳಿಂದ ಮುಂದೂಡಲಾಯಿತೆಂದು ತಾವು ಹೇಳಿದ್ದೀರಿ. ಬೇರೆ ಬೇರೆ ಕಾರಣಗಳಿಂದ ಅದನ್ನು ಮುಂದೂಡಿದ್ದು ನಿಜ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗ ಚುನಾವಣೆಯನ್ನು ಮಾಡಿದ್ದೇವೆ. ಅದಕ್ಕೇ ಎಲ್ಲರೂ ಸಂತೋಷವನ್ನು ಪಡಬೇಕು. ಅಷ್ಟೇ ಅಲ್ಲ, ನಮ್ಮ ಸದಸ್ಯರು,ಅಂದರೆ ಬೆಳಿಗಾರರು ಆಗಲಿ, ಸೊಸೈಟಿಗಳಾಗಲಿ ಅವರೇನು ತಮ್ಮ ಮತವನ್ನು ಚಲಾಯಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದಕ್ಕೆ ನಾವು ಸಂಪೂರ್ಣವಾದ ಬೆಲೆಯನ್ನುಕೊಡುತ್ತಿದ್ದೇವೆ, ಅದಕ್ಕೆ ನಾವು ತಲೆಬಾಗುತ್ತಿದ್ದೇವೆ. ಅದರಲ್ಲಿ ಯಾವ ರೀತಿಯಾದ ಸಂಶಯವೂ ಬೇಡ ಅದರೆ, ಕಾನೂನಿನ ಪ್ರಕಾರ ನಾಮಿನೇಷನ್ ಮಾಡುವುದರ ಬಗ್ಗೆ ತಾವುಗಳು ಬಹಳಷ್ಟು ವಿಚಾರವನ್ನು ನಮ್ಮೆದುರಿಗೆ ಇಟ್ಟಿದ್ದೀರಿ. ಕಾನೂನನ್ನು ಬಿಟ್ಟು ನಾನು ಒಂದು ಹೆಜ್ಜೆಯನ್ನು ಮುಂದಿಡುವುದಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಕಾನೂನಿನ ಪ್ರಕಾರ ಏನೇನು ಮಾಡಲು ಸಾಧ್ಯವಿದೆಯೋ ಅದನ್ನು ಮಾತ್ರ ಮಾಡುತ್ತೇನೆ. ಕಾನೂನಿನ ಪ್ರಕಾರ ಸೆಕ್ಷನ್ 29ರ ಅಡಿಯಲ್ಲಿ ಮತ್ತು 53ರ ಅಡಿಯಲ್ಲಿ ಏನು ನಾಮಿನೇಷನ್ ಮಾಡಲು ಸಾಧ್ಯವೋ ಆ ರೀತಿ ನಾವು ನಾಮಿನೇಷನ್ ಮಾಡಿಯೇ ಮಾಡುತ್ತೇವೆ, ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು 1988ರ ಹೈಕೋರ್ಟ್‌ನ ಒಂದು ರೂಲಿಂಗ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ 1993ರ ಹೈಕೋರ್ಟಿನ ತೀರ್ಮಾನ ಇದೆ. ಅದನ್ನು, ತಮಗೆ ಕಳಿಸಿಕೊಡುತ್ತೇನೆ, ತಾವು ಅದನ್ನು ನೋಡಿ. ರಿಟ್ ಪಿಟಿಷನ್ ಅಪೀಲ್ ನಂಬರ್ 1190 : 1991, ಅದರಲ್ಲಿ 29ರ ಅಡಿಯಲ್ಲಿ ಮತ್ತು 53ರ ಅಡಿಯಲ್ಲಿ ನಮಗೆ ನಾಮಿನೇಷನ್ ಮಾಡುವುದಕ್ಕೆ ಬರುತ್ತದೆ ಎನ್ನುತಕ್ಕ ತೀರ್ಮಾನವನ್ನು ಹೈಕೋರ್ಟ್‌ನವರು ಕೊಟ್ಟಿದ್ದಾರೆ. ಇದನ್ನು ತಮ್ಮ ಬಳಿಗೆ ಕಳಿಸಿಕೊಡುತ್ತೇನೆ. ತಾವು ದಯಮಾಡಿ ಅದನ್ನು ನೋಡಿ. ಅಂತೂ ಹೈಕೋರ್ಟಿನ ನಿರ್ಣಯದ ಮುಖಾಂತರವಾಗಿ ಮತ್ತು ಕಾನೂನಿನ ಚೌಕಟ್ಟಿನಲ್ಲಿ ಎಷ್ಟು ಜನರಿಗೆ ನಾವು

ನಾಮಿನೇಷನ್ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಮಾತ್ರ ಮಾಡುತ್ತೇವೆ. ಅದರ ನಂತರ

(ಗೊಂದಲ)

ಉಪಾಧ್ಯಕ್ಷರು : ನಾಗಮಾರಪಳ್ಳಿಯವರೇ, ಅವರು ಹೇಳುವುದನ್ನು ಪೂರ್ತಿ ಕೇಳಿ,

(ಗೊಂದಲ)

ಡಾ॥ ಹೆಚ್.ಡಿ. ಲಮಾಣಿ : ಹೈಕೋರ್ಟಿನ ತೀರ್ಮಾನದ ಮುಖಾಂತರ ಮತ್ತು ಕಾನೂನು, ಬೈಲಾ ಪ್ರಕಾರ ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾತ್ರ ಮಾಡುತ್ತೇವೆ. ಅದಕ್ಕಿಂತ ಹೆಚ್ಚಿಗೆ ಮಾಡುದಿಲ್ಲ.

ಶ್ರೀ ಜೆ.ಸಿ. ಮಧುಸ್ವಾಮಿ : ಹಾಗೆ ಮಾಡದಿದ್ದರೆ ಡೆಮಾಕ್ರಟಿಕ್ ಪ್ರೊಸೆಸ್‌ನಲ್ಲಿ ಆ ಷುಗರ್ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ತಾವು ಏಕೆ ಬಿಡಬಾರದು. ನಾಮಿನೇಷನ್ ಮಾಡದೇ ಎಲೆಕ್ಟ್ ಆಗಿರುವ ಮೆಂಬರ್ ಗಳಿಗೆ ಏಕೆ ಬಿಡಬಾರದು? ಅದನ್ನು ಹೇಳಿ.

ಡಾ॥ ಹೆಚ್.ಡಿ. ಲಮಾಣಿ : ಅದು ಏನಾಗುತ್ತದೆ ಎಂದರೆ, ಇದುವರೆಗೂ ಕಾನೂನು ಪ್ರಕಾರವಾಗಿ ಮಾಡಿಕೊಂಡು ಬಂದಿದ್ದೇವೆ. ಅಷ್ಟೇ ಅಲ್ಲ, ಇಲ್ಲಿವರೆಗೆ ತಮ್ಮ ಸರ್ಕಾರ ಇದ್ದಾಗ ತಾವು ಏನು ಮಾಡಿದ್ದೀರಿ, ತಾವು ಸಹಿತ ಅದನ್ನೇ ಮಾಡಿಕೊಂಡು ಬಂದಿದ್ದೀರಿ. ಎಂ.ಕೆ. ಹುಬ್ಬಳ್ಳಿ ಫ್ಯಾಕ್ಟರಿ ಚುನಾವಣೆಯಾದಾಗ ಜನತಾದಳದಿಂದ ಮೂರು ಜನರು, ರೈತ ಸಂಘದವರು 6 ಜನರು ಹೀಗೆ ಒಟ್ಟು ಒಂಬತ್ತು ಜನ ಸದಸ್ಯರಾಗಿ, 6 ಜನರು ಆರಿಸಿ ಬಂದಿರುವವರ ಆಡಳಿತವನ್ನು ತಂದು ತಾವು ಅಧ್ಯಕ್ಷರನ್ನು ನೇಮಿಸಿದ್ದೀರಿ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಇಲ್ಲಿ ತಾವು ಹಾಗೆ ಮಾಡಿಕೊಂಡು

(ಗೊಂದಲ)

ಡಾ॥ ಹೆಚ್.ಡಿ. ಲಮಾಣಿ : ಅವರು ಕಾನೂನು ಬಿಟ್ಟು ಮಾಡಿದ್ದರು. ನಾವು ಕಾನೂನು ಪ್ರಕಾರ ಮಾಡುತ್ತಾ ಇದ್ದೇವೆ ನಾವು ಕಾನೂನು ಬಿಟ್ಟು ಹೋಗುವುದಿಲ್ಲ. ನಾವು ಕಾನೂನು ಪ್ರಕಾರ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇವೆ.

14ನೇ ತಾರೀಖು ಅಧ್ಯಕ್ಷರೆ, ಉಪಾಧ್ಯಕ್ಷರ ಚುನಾವಣೆ ಮಾಡುತ್ತೇವೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ಒಂದು ಭರವಸೆ ಬೇಕಾಗಿದೆ ಅವರು ಒಂದು ಮಾತನ್ನು ಹೇಳಿದ್ದಾರೆ. ಕಾಯಿದೆ ಬದ್ಧವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಹೆಚ್ಚು ಚರ್ಚೆಗೆ ಹೋಗುವುದಿಲ್ಲ. ಕಾಯಿದೆ ಬದ್ಧವಾಗಿ ಹೈಕೋರ್ಟಿಗೆ ನಿರ್ಣಯವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆಂದು ಹೇಳಿದಾಗ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ಅವರು ವಿರುದ್ಧವಾಗಿ ಮಾಡಿದರೆ ನಮ್ಮ ಮಾರ್ಗ ನಮಗೆ ಇದೆ. ನಾನು ಮತ್ತೊಂದು ಮಾತನ್ನು ಹೇಳಿದ್ದೆ ಸೆಕ್ಷನ್ 29-4ರ ಪ್ರಕಾರ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ 'Shall'. It is a mandatory provision. 15 ದಿನಗಳೊಳಗೆ ಮಾಡಬೇಕು ಎಂದು ಇದೆ. ಈಗ ಚುನಾವಣೆ 14ನೇ ತಾರಿಖೀಗೆ ಎಂದು ಹೇಳಿದ್ದಾರೆ. ಆ ಚುನಾವಣೆಯನ್ನು ಅದೇ ದಿನ ತಾವು

ಮಾಡಬೇಕಾಗುತ್ತದೆ, ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ನಾವು ಬರುವುದಿಲ್ಲ. ಅದರ ಬಗ್ಗೆ ನನಗೆ ಭರವಸೆ ಬೇಕು.

ಉಪಾಧ್ಯಕ್ಷರು : ಕಾನೂನು ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರಲ್ಲಾ.....

ಡಾ|| ಹೆಚ್.ಡಿ. ಲಮಾಣಿ : 14ನೇ ತಾರೀಖು ನಾವು ಆ ಚುನಾವಣೆಯನ್ನು ಮಾಡುತ್ತಿದ್ದೇವೆಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಗಮನಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ತಾವು ಏನು ಹೇಳುತ್ತಿರೋ ಅದನ್ನು ನೋಡಿಕೊಂಡು ಮುಂದೆ ನಾನು ಮಾತನಾಡುತ್ತೇನೆ.

(2) **ಇತ್ತೀಚೆಗೆ ಬೆಂಗಳೂರಿನ ಸದಾಶಿವನಗರದಲ್ಲಿ ಕನ್ನಡಿಗರ ಭಾವನೆಗಳಿಗೆ ವಿರುದ್ಧವಾಗಿ ಸ್ಥಾಪಿಸಿರುವ ಶಿವಾಜಿ ಪ್ರತಿಮೆಯನ್ನು ತೆಗೆಸುವ ಬಗ್ಗೆ.**

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ ಇತ್ತೀಚೆಗೆ ಬೆಂಗಳೂರಿನ ಸದಾಶಿವನಗರದಲ್ಲಿ ಕನ್ನಡಿಗರ ಭಾವನೆಗಳಿಗೆ ವಿರುದ್ಧವಾಗಿ ಸ್ಥಾಪಿಸಿರುವ ಶಿವಾಜಿ ಪ್ರತಿಮೆಯನ್ನು ತೆಗೆಸುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮರಾಠಾ ವೆಲ್‌ಫೇರ್ ಅಸೋಸಿಯೇಷನ್ ಕಾರ್ಯದರ್ಶಿಯವರು ದಿನಾಂಕ 21-12-83ರಂದು ಅಂದಿನ ನಗರಾಭಿವೃದ್ಧಿ ಸಚಿವರಿಗೆ ಯುವಜನ ಸೇವಾ ಸಚಿವರ ಮೂಲಕ ಸದಾಶಿವನಗರದ ಸ್ಯಾಂಕಿ ರಸ್ತೆಯಲ್ಲಿರುವ ಈಜುಕೊಳದ ಪೂರ್ವಭಾಗದಲ್ಲಿಯ ಜಾಗದಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡುವಂತೆ ಮನವಿಸಲ್ಲಿಸಿರುತ್ತಾರೆ. ಈ ಮನವಿಯನ್ನು ಪರಿಗಣಿಸಲು ಬೆಂಗಳೂರು ಮಹಾನಗರ ಪಾಲಿಕೆಗೆ ಕಳುಹಿಸಲಾಗಿತ್ತು.ಮಹಾನಗರ ಪಾಲಿಕೆಯ ಸಭೆ ನಡವಳಿಕೆ ವಿಷಯ ಸಂಖ್ಯೆ 206 (503) ರಲ್ಲಿ ದಿನಾಂಕ 26-6-85ರಂದು ಸದಾಶಿವನಗರದ ಈಜುಕೊಳದ ಪೂರ್ವಭಾಗದಲ್ಲಿರುವ ಉದ್ಯಾನವನದ ಪೂರ್ವಕ್ಕೆ ಮರಾಠಾ ಕ್ಷೇಮಾಭಿವೃದ್ಧಿ ಸಂಘದವರು ಶ್ರೀ ಛತ್ರಪತಿ ಶಿವಾಜಿ ಪ್ರತಿಮೆ ಸ್ಥಾಪಿಸಲು ತೀರ್ಮಾನಿಸಿತ್ತು. ಈ ತಿರ್ಮಾನದಂತೆ ಸಂಬಂಧಪಟ್ಟ ಸಂಘದವರಿಗೆ ಜಾಗವನ್ನು ದಿನಾಂಕ 5-3-87 ರಂದು ಆಗಿನ ಆಯುಕ್ತರು ಸಂಖ್ಯೆ. 49:86-87 ರಲ್ಲಿ ಒಂದಪ ಹಿಂಬರಹ ನೀಡಿ ಸದರಿ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡಿರುತ್ತಾರೆ. ಇದಾದ ನಂತರ ಬೆಂಗಳೂರು ಕಲಾ ಆಯೋಗದ ಅಧ್ಯಕ್ಷರು ಸಹ ಈ ಪ್ರತಿಮೆಯನ್ನು ಸ್ಥಾಪಿಸಲು ಅನುಮತಿ ನೀಡಿರುತ್ತಾರೆ. ಎಂದು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ದಿನಾಂಕ 20-1-1994ರ ವರದಿಯಲ್ಲಿ ತಿಳಿಸಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡದ ಉಪವಿಧಿಗಳು 1983ರ ನಿಯಮ 5ರನ್ವಯ ಯಾವುದೇ ಪ್ರತಿಮೆ ಸ್ಥಾಪಿಸಲು ಅನುಮತಿ ನೀಡುವ ಅಧಿಕಾರವನ್ನು ಬೆಂಗಳೂರು ಮಹಾನಗರ ಪಾಲಿಕೆಯೇ ಹೊಂದಿರುತ್ತದೆ. ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸುವ ಅಗತ್ಯವಿರುವುದಿಲ್ಲ. ಆದುದರಿಂದ ಸರ್ಕಾರ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಆದರೆ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಯ ಆದೇಶ ಸಂಖ್ಯೆ ಐಟಿವೈ 41 ಕೆಆರ್‌ಎ 86 ದಿನಾಂಕ 25-3-86 ಮತ್ತು ಐಟಿವೈ 200 ಕೆಆರ್‌ಎ. 86 ದಿನಾಂಕ 20-11-86ಗಳಲ್ಲಿ ಒಟ್ಟು ರೂ. 3.00 ಲಕ್ಷಗಳನ್ನು ಶ್ರೀ ಛತ್ರಪತಿ ಶಿವಾಜಿ ಪ್ರತಿಮೆಯನ್ನು ಸ್ಥಾಪಿಸಲು ಮಂಜೂರು ಮಾಡಿದೆ.